**Through VC in the presence of official Co-ordinator**
**Sri.Ananda Gadale, Consultant**
**E.Mail : deo.kalaburagi@gmail.com**

**ಸಾಕ್ಷಿಗೆ ದಿನಾಂಕ 03.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ನಿಪಿ– 16 ರೊಂದಿಗೆ ಉಪ ತಹಶೀಲ್ದಾರ್ ಮತ್ತು ಗ್ರಾಮ ಲೆಕ್ಕಾಧಿಕಾರಿಯವರು ಮಾಡಿರುವ ವರದಿ ಹಾಗೂ ಆರ್ ಟಿ ಸಿ ಗಳನ್ನು ಲಗತ್ತಿಸಿರುತ್ತೇನೆ. ಸಾಕ್ಷಿಯು ಮೂರು ವರದಿಗಳನ್ನು ನೋಡಿ ಗುರುತಿದ್ದು ಅವುಗಳನ್ನು ನಿಪಿ–20 ರಿಂದ ನಿಪಿ–22 ಎಂದು ಗುರುತಿಸಲಾಯಿತು. ಸಾಕ್ಷಿಯು ಆರ್ ಟಿ ಸಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–23 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :–**

ಸರ್ವೇ ನಂಬರ್ 174 ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ಗೊತ್ತಿಲ್ಲ. ಆರೋಪಿಗೆ ಸಂಬಂಧಿಸಿದಂತೆ ಸರ್ವೇ ನಂಬರ್ 174 ರಲ್ಲಿ ಅನಧೀಕೃತವಾಗಿ ವ್ಯವಸಾಯ ಮಾಡುತ್ತಿರುವ ಬಗ್ಗೆ ದಾಖಲೆ ಇಲ್ಲ. ಸರ್ವೇ ನಂಬರ್ 174 ಕ್ಕೆ ಸಂಬಂಧಪಟ್ಟಂತೆ ಹದ್ದು ಬಸ್ತು ಆಗಿದಿಯೋ, ಇಲ್ಲವೋ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ವರದಿಯಲ್ಲಿ ಸರ್ವೇ ನಂಬರ್ 174 ಸಂಬಂಧಪಟ್ಟು ಒಟ್ಟು ವಿಸ್ತೀರ್ಣವನ್ನು ನಮೂದು ಮಾಡಿಲ್ಲ ಎಂದರೆ ಹೌದು. ಸರ್ವೇ ನಂಬರ್ 174ಕ್ಕೆ ಸಂಬಂಧಪಟ್ಟು ನ್ಯಾಯಾಲಯಗಳಲ್ಲಿ ಹಲವಾರು ವ್ಯಾಜ್ಯಗಳು ಇರುವ ನ್ಯಾಯಾಲಯದಿಂದ ಯಾವುದೇ ದಾಖಲೆಗಳನ್ನು ನೋಡಿಲ್ಲ. ಪೊಲೀಸ್ ರಿಗೆ ನನಗೆ ಒಂದು ಮನವಿಯನ್ನು ನೀಡಿರುತ್ತಾರೆ ಎಂದರೆ ಹೌದು. ಸದರಿ ಮನವಿಯನ್ನು ನಾನು ಕಾಪಿ ಮಾಡಿ ಪೊಲೀಸ್ ರು ನೀಡಿದಂತಹ ವರದಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಹೌದು.

ನಿಪಿ–20 ನ್ನು ಕೇಸಿಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ತನಿಖೆಯನ್ನು ಮಾಡದೇ ಪರಿಶೀಲನೆ ಮಾಡದೇ ಪೊಲೀಸ್ ರ ಕೋರಿಕೆ ಮೇರೆಗೆ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ವರದಿಯ ಪ್ರಕಾರ ಸರ್ವೇ ನಂಬರ್ 174 ರಲ್ಲಿ ಅನುಭವ ಇರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಕೋರಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**